7	ಕಮಲಾಪೂರ ಜೇಂಗತಾಣಾ ರಸ್ತೆ ಕಿಮೀ. 0.00 ದಿಂದ 13.00	13.00	ಜಿಲ್ಲಾ ಮುಖ್ಯ ರಸ್ತೆ
8	ಕಡಗಂಚಿ ವಿಕೆಸಲಗರ್ ರಸ್ತೆ ಕಿ.ಮೀ. 2.00 ದಿಂದ 26.00	24.00	ಜಿಲ್ಲಾ ಮುಖ್ಯ ರಸ್ತೆ
	ಒಟ್ಟು	134.00	

ಆ) ಕಮಲಾಪುರ ಮತಕ್ಷೇತ್ರದಲ್ಲಿ ಬರುವ ಮೇಲೆ ಬರೆದ ಎಲ್ಲಾ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಅಲ್ಲಲ್ಲಿ ಕೆಲವು ಭಾಗಗಳಲ್ಲಿ ರಸ್ತೆ ಗುಂಡಿಗಳು ಕಾಣಿಸಿಕೊಂಡಿವೆ ಈ ರಸ್ತೆಗಳು ಒಟ್ಟು 134.10 ಕಿಮೀ. ಉದ್ದದಲ್ಲಿ ಹೆಚ್ಚು ಹಾಳಾದ ರಸ್ತೆಗಳ ಒಟ್ಟು ಉದ್ದ ಸುಮಾರು 28.00 ಕಿಮೀ ಇರುತ್ತದೆ. ಶ್ರೀರಂಗಪಟ್ಟಣ ಬೀದರ ರಾಜ್ಯ ಹೆದ್ದಾರಿಯನ್ನು ಬಲಪಡಿಸುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಇ) ಈ ರಸ್ತೆಗಳನ್ನು ದುರಸ್ತಿ ಪಡಿಸುವ ಕಾರ್ಯ ಕೈಗೊಳ್ಳಲಾಗಿದೆ. ಈ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ತೇಲಗುಣಿ ಕೋತನ ಹಿಪ್ಪರಗಾ ರಸ್ತೆಯ ಕಿಮೀ. 6.60 ರಿಂದ 10.00 ವರೆಗೆ ಕೇಂದ್ರ ರಸ್ತೆ ನಿಧಿಯಡಿಯಲ್ಲಿ ಅಭಿವೃದ್ಧಿ ಕೆಲಸ ಪ್ರಗತಿಯಲ್ಲಿದೆ. 21.20ನೇ ಕಿಮೀ ದಿಂದ 27.00 ನೇ ಕಿಮೀ. ವರೆಗಿನ ಉದ್ದವನ್ನು ಬಲಪಡಿಸುವ ಕಾಮಗಾರಿಯನ್ನು ಉದ್ದೇಶಿಸಲಾಗಿದೆ.

ರಾಜ್ಯದಲ್ಲಿ ಜಿಲ್ಲಾದಿಕಾರಿಗಳ ಕಛೇರಿಗಳ ಗಣಕೀಕರಣ

4350(5228) ಶ್ರೀ ಸಭಾಪತಿ ಯು.ಆರ್. (ಉಡುಪಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಜಿಲ್ಲಾಧಿಕಾರಿಗಳ ಕಛೇರಿಗಳನ್ನು ಸಂಪೂರ್ಣವಾಗಿ ಗಣಕೀಕರಣ ಗೊಳಿಸಲಾಗಿದೆ ; (ಜಿಲ್ಲಾವಾರು, ಜಿಲ್ಲೆಗಳ ಹೆಸರಿನೊಂದಿಗೆ ವಿವರಗಳನ್ನು ನೀಡಿರಿ) ;

ಆ) ಗಣಕೀಕರಣವಾಗಿದ್ದಲ್ಲಿ, ಯಾವ ಯಾವ ರೀತಿಯಲ್ಲಿ ಈ ವ್ಯವಸ್ಥೆಯನ್ನು ಸಾರ್ವಜನಿಕರಿಗಾಗಿ ಬಳಸಿಕೊಳ್ಳಲಾಗುತ್ತಿದೆ ; (ಸಾಫ್ಟ್‌ವೇರ್ ವಿವರ ತಿಳಿಸುವುದು) ;

ಇ) ಗಣಕೀಕರಣ ಆಗದೆ ಇದ್ದಲ್ಲಿ, ಆಗದೆ ಇರುವ ಕಾರನ ಮತ್ತು ಯಾವಾಗ ಗಣಕೀಕರಣ ಗೊಳಿಸುವ ವ್ಯವಸ್ಥೆಯನ್ನು ಸಂಪೂರ್ಣಗೊಳಿಸಲಾಗುವುದು ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಗಣಕ ಯಂತ್ರವನ್ನು ಎಲ್ಲಾ ಜಿಲ್ಲಾಧಿಕಾರಿಗಳ ಕಛೇರಿಗಳಿಗೆ ಒದಗಿಸಲಾಗಿದೆ. ಆದಾಗ್ಯೂ ಜಿಲ್ಲಾ ಅಧಿಕಾರಿಗಳು ತಮ್ಮ ಕಛೇರಿಯ ಕೆಲವು ಕಾರ್ಯ ನಿರ್ವಹಣೆಯನ್ನು ಮಾತ್ರ ಗಣಕೀಕರಣ ಗೊಳಿಸಿಕೊಂಡಿರುತ್ತಾರೆ. ಯಾವುದೇ ಜಿಲ್ಲಾಧಿಕಾರಿಗಳ ಕಛೇರಿಗಳ ಕಾರ್ಯನಿರ್ವಹಣೆಯನ್ನು ಸಂಪೂರ್ಣವಾಗಿ ಗಣಕೀಕರಣ ಗೊಳಿಸಿರುವುದಿಲ್ಲ.

ಆ) ಮಂಡ್ಯ ಜಿಲ್ಲಾಧಿಕಾರಿ ಕಛೇರಿ ಹೊರತುಪಡಿಸಿ ಜಿಲ್ಲಾಧಿಕಾರಿಗಳ ಕಛೇರಿಗಳ ಮುಂಬಾಗದಲ್ಲಿ ಸಾರ್ವಜನಿಕರ ಮನವಿಗಳನ್ನು ಸ್ವೀಕರಿಸಲು ಮುಂಭಾಗದ ಕಛೇರಿಯನ್ನು ಸ್ಥಾಪಿಸಲಾಗಿದೆ. ಕಛೇರಿಯ ಆಂತರಿಕ ದಕ್ಷತೆಯನ್ನು ಹೆಚ್ಚಿಸುವ ಸಲುವಾಗಿ ಗಣಕೀಕರಣವನ್ನು ಪ್ರಾರಂಭಿಸಲಾಗುವುದು ನಿಧಾನವಾಗಿ ಸಾರ್ವತ್ರಿಕ ಕೇಂದ್ರಗಳನ್ನು ಎಲ್ಲಾ ತಾಲ್ಲೂಕುಗಳ ಕಛೇರಿಗಳಲ್ಲಿ ತೆರೆಯಲಾಗುವುದು.

ಇ) ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಅನೇಕ ವಿಷಯಕ್ಕೆ ಸಂಬಂಧಪಟ್ಟಂತೆ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ. ಎಲ್ಲಾ ಕಾರ್ಯ ನಿರ್ವಹಣೆಯನ್ನು ಹಂತ ಹಂತವಾಗಿ ಗಣಕೀರಣ ಗೊಳಿಸಲಾಗುವುದು.